SHORT NOTICE QUESTION AND ANSWER

SETTING UP OF A NUCLEAR POWER CENTRE NEAR SHARAVATHI PROJECT

65. Sri KAGODU THIMMAPPA (Sagar).—Will the Minister for Public Works and Electricity be pleased to state :—

(a) whether it is a fact that the Central Government has conducted investigation for setting up of a Nuclear Power Centre in Mysore State;

(b) whether it has come to the notice of the Government that all facilities for setting up of such a Centre are available near Sharavathi Project;

(c) whether State Government has made efforts so for to convince the Central Government for setting up of a Nuclear Power Centre near Sharavathi Project?

Sri H. M. CHANNABASAPPA (Minister for Public Works and Electricity).—

(a) The question of locating a Nuclear Power Station in the Southern Region, consisting of Mysore, Tamil Nadu, Andhra Pradesh and Kerala States is under the consideration of the Government of India.

(b) Yes.

(c) Efforts are made by Government to get the station located in the State.

ಶ್ರೀ ಕಾಗೋಡು ತಿಮ್ಮಪ್ಪ.— ನಮ್ಮ ರಾಜ್ಯದಲ್ಲಿ ವಿದ್ಯುಚ್ಛಕ್ತಿ ಉತ್ಪಾದನೆಯ ಶಕ್ತಿ ಎಷ್ಟಿದೆ ಮತ್ತು ಈಗಿರತಕ್ಕ ಉತ್ಪಾದನಾ ಶಕ್ತಿ ನಮಗೆ ಮುಂದೆ ಬರತಕ್ಕ ೧೫–೨೦ ವರ್ಷಕ್ಕೆ ಸಾಕಾಗಬಹುದು ಎಂದು ಅಂದಾಜು ಮಾಡಿದ್ದೀರಾ?

†ಎಚ್. ಎಂ. ಚನ್ನಬಸಪ್ಪ.—ಅಂದಾಜು ಯೋಜನೆ ಮಾಡಿದ್ದೇವೆ. ನಮ್ಮ ಸಪರ ಪೊಟೆನ್‌ಷಿಯಲ್ ಐದೂವರೆ ಮಿಲಿಯನ್ ಕಿಲೋವಾಟ್. ನಾವು ಎಲ್ಲವನ್ನೂ ಉಪಯೋಗಕ್ಕೆ ತಂದರೂ ನಮ್ಮಲ್ಲಿ ವಿದ್ಯುಚ್ಛಕ್ತಿ ಏನೇನೂ ಸಾಲುವುದಿಲ್ಲ ಎನ್ನುವುದು ಸರ್ಕಾರದ ಸ್ಪಷ್ಟ ಅಭಿಪ್ರಾಯವಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಅಣು ವಿದ್ಯುತ್ ಕೇಂದ್ರವೊಂದನ್ನು ದಕ್ಷಿಣ ರಾಜ್ಯಗಳಲ್ಲಿ ಸ್ಥಾಪನೆ ಮಾಡುವ ವಿಷಯ ಭಾರತ ಸರ್ಕಾರದ ಪರಿಶೀಲನೆಯಲ್ಲಿದೆ

ಎಂದು ಹೇಳಿದ್ದಾರೆ. ದಕ್ಷಿಣ ರಾಜ್ಯಗಳಲ್ಲಿ ಉತ್ಪಾದನೆಯಾಗುತ್ತಿರತಕ್ಕ ವಿದ್ಯುಚ್ಛಕ್ತಿಯನ್ನು ಅವರವರ ಅವಶ್ಯಕತೆಗನುಗುಣವಾಗಿ ಸಮಾನವಾಗಿ ಹಂಚಿಕೆ ಮಾಡತಕ್ಕ ವ್ಯವಸ್ಥೆ ಏನಾದರೂ ಇದೆಯೇ? ಹಾಗಿದ್ದರೆ ನಮಗೆ ಕೊರತೆಯಾಗತಕ್ಕ ವಿದ್ಯುಚ್ಛಕ್ತಿಯನ್ನು ಯಾವ ಮೂಲದಿಂದ ಪಡೆಯುವುದಕ್ಕೆ ಪ್ರಯತ್ನ ಪಡುತ್ತೀರಿ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಮ್ಮಲ್ಲಿರತಕ್ಕ ವಿದ್ಯುಚ್ಛಕ್ತಿ ಪೊಟೆನ್ಷಿಯಲ್ ಏನಿದೆ ಅದು ನಮಗೆ ಸಾಲುವುದಿಲ್ಲವೆಂದ ಮೇಲೆ ಮುಂದೆ ನಮ್ಮ ಅವಶ್ಯಕತೆಗಳನ್ನು ಪೂರೈಕೆ ಮಾಡುವುದಕ್ಕೆ ಥರ್ಮಲ್ ಸ್ಟೇಷನ ಹಾಕುವುದು ಇಲ್ಲವೇ ನ್ಯೂಕ್ಲಿಯರ್ ಸ್ಟೇಷನ ಸ್ಥಾಪನೆ ಮಾಡುವುದೊಂದೇ ಮಾರ್ಗ.

ಶ್ರೀ ಕಾಗೋಡು ತಿಮ್ಮಪ್ಪ.—ನಮ್ಮ ದಕ್ಷಿಣ ರಾಜ್ಯಗಳಲ್ಲಿ ಹೋಲಿಸಿ ನೋಡಿದರೆ ಅಣು ವಿದ್ಯುತ್ ಕೇಂದ್ರ ಸ್ಥಾಪನೆ ಮಾಡುವುದಕ್ಕೆ ನಮ್ಮ ರಾಜ್ಯದಲ್ಲಿ ಎಲ್ಲ ವ್ಯವಸ್ಥೆ ಮತ್ತು ಅನುಕೂಲತೆಗಳಿವೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದ ಪಕ್ಷದಲ್ಲಿ ಅದನ್ನು ಕೇಂದ್ರ ಸರ್ಕಾರಕ್ಕೆ ಮನವರಿಕೆಯಾಗುವ ರೀತಿಯಲ್ಲಿ ತಿಳಿಸಲು ಪ್ರಯತ್ನ ಪಡುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಮ್ಮ ಅಣು ವಿದ್ಯುತ್ ಉತ್ಪಾದನೆ ಮಾಡತಕ್ಕ ಅವಕಾಶ ತುಂಬ ಇದೆ; ಯೋಗ್ಯ ಸ್ಥಳಗಳಿವೆ. ಕೇಂದ್ರ ಸರ್ಕಾರದವರು ದಕ್ಷಿಣ ವಲಯದಲ್ಲಿ ಎಂದರೆ ಕೇರಳ, ತಮಿಳುನಾಡು, ಮೈಸೂರು ಮತ್ತು ಆಂಧ್ರ ಈ ರಾಜ್ಯಗಳಲ್ಲಿ ಎಲ್ಲಿಯಾದರೂ ಅಣು ವಿದ್ಯುತ್ ಕೇಂದ್ರ ಸ್ಥಾಪನೆ ಮಾಡಬೇಕೆಂದು ಆಲೋಚಿಸಿದ್ದಾರೆ. ಅದಕ್ಕೋಸ್ಕರವಾಗಿ ಒಂದು ಟೀಮ್ ಕೂಡ ಅಪಾಯಿಂಟ್ ಮಾಡಿದ್ದಾರೆ. ಅವರು ಈ ದಕ್ಷಿಣ ವಲಯದ ರಾಜ್ಯಗಳಲ್ಲಿ ಪ್ರವಾಸ ಮಾಡಿ ಈಗಾಗಲೇ ಅನೇಕ ವಿಷಯಗಳನ್ನು ಸಂಗ್ರಹ ಮಾಡಿದ್ದಾರೆ. ಮೈಸೂರು ರಾಜ್ಯಕ್ಕೂ ಎರಡು ಸಲ ಬಂದಿದ್ದರು. ಅಣು ವಿದ್ಯುತ್ ಕೇಂದ್ರವನ್ನು ಸ್ಥಾಪನೆ ಮಾಡುವುದಕ್ಕೆ ಅನುಕೂಲವಾದ ಸ್ಥಳಗಳು ಎಂದು ಮೈಸೂರು ಸರ್ಕಾರ ಯೋಚನೆ ಮಾಡಿದ್ದ ಸ್ಥಳಗಳನ್ನು ಅವರಿಗೆ ತೋರಿಸಿದೆವು. ಅವೆಲ್ಲವನ್ನೂ ಅವರು ಹೋಗಿ ನೋಡಿ ಕಡೆಗೆ ಎರಡು ಸ್ಥಳಗಳು ಅಣು ವಿದ್ಯುತ್ ಕೇಂದ್ರ ಸ್ಥಾಪನೆ ಮಾಡುವುದಕ್ಕೆ ಯೋಗ್ಯವಿದೆ ಎನ್ನುವ ಅಭಿಪ್ರಾಯ ಅವರಲ್ಲಿ ಮೂಡಿದೆ. ಅವರು ಅನೇಕ ಮಾಹಿತಿಗಳನ್ನು ನಮ್ಮಿಂದ ಕೇಳಿದ್ದಾರೆ. ಆ ಮಾಹಿತಿಗಳನ್ನೆಲ್ಲ ಒದಗಿಸಿದ್ದೇವೆ. ಇದರ ಜೊತೆಗೆ ಮೈಸೂರು ರಾಜ್ಯ ಸರ್ಕಾರ ಒಂದು ವಿಶೇಷ ಸೆಲ್ ಏರ್ಪಾಡು ಮಾಡಿ ಒಬ್ಬ ಅನುಭವಸ್ಥರಾದ ಇಂಜನಿಯರನ್ನು ಅದೇ ಕೆಲಸಕ್ಕೆ ಇಟ್ಟು ಅವರು ಕೇಳುವ ಮಾಹಿತಿಗಳನ್ನು ಸಂಗ್ರಹ ಮಾಡಿ ಒದಗಿಸಿ ಕೊಡತಕ್ಕ ವ್ಯವಸ್ಥೆ ಮಾಡಿದ್ದೇವೆ.

ಶ್ರೀ ಸಿ. ಬೈರೇಗೌಡ. — ದಕ್ಷಿಣ ರಾಜ್ಯಗಳಿಗೆ ಅನ್ವಯವಾಗುವಂತೆ ವಿದ್ಯುಜ್ಜಾಲವಿದೆ. ಅದರಿಂದ ನಮ್ಮ ರಾಜ್ಯಕ್ಕೆ ಆಗುತ್ತಿರತಕ್ಕ ಅನುಕೂಲವೇನು?

ಶ್ರೀ ಎಚ್. ಎಂ ಚನ್ನಬಸಪ್ಪ.—ಇದು ವಿದ್ಯುಜ್ವಾಲಕ್ಕೆ ಸಂಬಂಧಪಟ್ಟ ಪ್ರಶ್ನೆಯಲ್ಲ. ಪ್ರಶ್ನೆ ಇರತಕ್ಕದ್ದು ಅಣು ವಿದ್ಯುತ್ ಕೇಂದ್ರ ಸ್ಥಾಪನೆ ಮಾಡತಕ್ಕದ್ದು. ಬಹುಶಃ ಮಾನ್ಯ ಸದಸ್ಯರು ತಮ್ಮ ಮನಸ್ಸಿನಲ್ಲಿ ಮೂರು ನಾಲ್ಕು ರಾಜ್ಯಗಳಲ್ಲಿ ಅಣು ವಿದ್ಯುತ್ ಕೇಂದ್ರಗಳು ಎಲ್ಲೆಲ್ಲಿನೆ, ಅದರಿಂದ ನಮಗೆ ಪ್ರಯೋಜನ ಬರುತ್ತಿದೆಯೇ ಎನ್ನುವ ಅಭಿಪ್ರಾಯವನ್ನು ಇಟ್ಟುಕೊಂಡಿರಬಹುದು ಎಂದು ನಾನು ಊಹೆ ಮಾಡುತ್ತೇನೆ. ಕಲ್ಪಾಕಂ ಎನ್ನುವ ಅಣು ಕೇಂದ್ರ ತಮಿಳು ನಾಡಿನಲ್ಲಿದೆ, ರಾಜಾಸ್ತಾನದಲ್ಲಿ ರಾಣಾ ಪ್ರತಾಪ್ ನ್ಯೂಕ್ಲಿಯರ್ ಸ್ಟೇಷನ್ ಎಂದಿದೆ, ಇನ್ನೊಂದು ಮಹಾರಾಷ್ಟ್ರದಲ್ಲಿ ತಾರಾಪುರ ಎಂದು ಇದೆ. ಸಾಮಾನ್ಯವಾಗಿ ಕೇಂದ್ರ ಸರಕಾರದವರು ಅಣು ಕೇಂದ್ರ ಗಳನ್ನು ಸ್ಥಾಪನೆ ಮಾಡುವಾಗ ದಕ್ಷಿಣದಲ್ಲಿರುವ ಸುತ್ತಮುತ್ತಲಿನ ಎಲ್ಲಾ ರಾಜ್ಯ ಗಳಲ್ಲಿ ಇದರ ಬಗ್ಗೆ ವಿಚಾರ ನೂಡುತ್ತಾರೆ, ಮತ್ತು ಎಲ್ಲ ರಾಜ್ಯಗಳಿಗಿಂತ ಇಲ್ಲಿ ಹೆಚ್ಚು ಅನುಕೂಲಗಳಿವೆ ಎಂದು ಅವರಿಗೆ ಮನಗಂಡಿದೆ ಮತ್ತು ಕೇಂದ್ರದವರ ಆಶೆಯವೂ ಇದೆ ಎಂದು ನಮಗೆ ಕಾಣುತ್ತದೆ. ಅಣು ವಿದ್ಯುತ್ ಕೇಂದ್ರವನ್ನು ತಮಿಳು ನಾಡಿನಲ್ಲಾಗಲೀ, ಆಂಧ್ರ ಪ್ರದೇಶದಲ್ಲಾಗಲೀ, ಇಲ್ಲವೇ ಕೇರಳದಲ್ಲಾಗಲೀ ಇದರ ಬಗ್ಗೆ ಇರುವ ಎಲ್ಲ ಅನುಕೂಲಗಳನ್ನೂ ಕೇಂದ್ರದವರು ನೋಡಿಕೊಂಡು ಮಾಡು ತ್ತಾರೆ ಎನ್ನುವುದನ್ನು ನಾನು ತಮಗೆ ಇಲ್ಲಿ ಸ್ಪಷ್ಟಪಡಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ನಮ್ಮ ದೇಶದಲ್ಲಿ ಉತ್ಪಾದನೆಯಾಗುವ ವಿದ್ಯುತ್ತಿನ ಉತ್ಪಾದನೆ ಎಷ್ಟು, ಇನ್ನೂ ಹತ್ತು ಅಥವಾ ಹದಿನೈದು ವರ್ಷಗಳಲ್ಲಿ ನಮಗೆ ಕೊರತೆ ಎಷ್ಟು ಬರುತ್ತದೆ ಎನ್ನುವ ಒಂದು ಅಂದಾಜು ಮಾಡಿಕೊಂಡು ಇಂತಹ ಒಂದು ಅಣು ವಿದ್ಯುತ್ ಕೇಂದ್ರವನ್ನು ಸ್ಥಾಪನೆ ಮಾಡುವದರಿಂದ ದೇಶ ದಲ್ಲಿ ಮುಂದೆ ಒದಗುವ ಕೊರತೆಯನ್ನು ನೀಗಿಸಿಕೊಳ್ಳಲು ಸಾಧ್ಯವಾಗುವುದಿಲ್ಲವೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೊರತೆ ನೀಗಲು ಸಾಧ್ಯವಾಗುತ್ತದೆ ಎಂದೇ ಇತರ ಎಲ್ಲ ಕ್ಷೇತ್ರಗಳಿಗಿಂತಲೂ ನಮ್ಮ ಮೈಸೂರು ರಾಜ್ಯದಲ್ಲಿರುವ ಕ್ಷೇತ್ರದಲ್ಲಿ ಅನುಕೂಲಗಳಿವೆ ಎಂದು ಇದರ ಬಗ್ಗೆ ಎಲ್ಲ ಮಾಹಿತಿಗಳನ್ನೂ ಪಡೆದು, ಈಗಾಗಲೇ ಕೇಂದ್ರದವರು ನೇಮಕ ಮಾಡಿರುವ ಟೀಮಿಗೆ, ಯಾವ ಯಾವ ಅಂಶಗಳನ್ನು ತಿಳಿಸ ಬೇಕು ಮತ್ತು ಏನೇನು ಅನುಮಾನಗಳನ್ನು ಅವರು ವ್ಯಕ್ತ ನೂಡಿದ್ದಾರೆ. ಅದನ್ನು ಪರಿಹರಿಸಲು ಅನುಕೂಲವಾಗುವಂತೆ ಎಲ್ಲ ಅಂಶಗಳ ವಿವರಗಳನ್ನೂ ಅವರಿಗೆ ಕಳುಹಿಸಿಕೊಡಲಾಗಿದೆ. ನಮ್ಮ ದೇಶದಲ್ಲಿ ಶರಾವತಿಯ ಬಳಿ ಹಾಗೂ ತುಂಗಭದ್ರಾ ಬಲದಂಡೆಯ ಬಳಿ ಅಣು ವಿದ್ಯುತ್ ಕೇಂದ್ರಗಳನ್ನು ಸ್ಥಾಪನೆ ಮಾಡುವುದಕ್ಕೆ ವಿಶೇಷ ರೀತಿಯಾದ ಅನುಕೂಲಗಳು ಇವೆ ಎನ್ನುವುದನ್ನು ಅವರಿಗ ಈಗಾಗಲೇ ಅರಿವು ಮಾಡಲಾಗಿದೆ ಮತ್ತು ಕೇಂದ್ರದ ಟೀಮಿನ ಮೇಲೆ ಒತ್ತಾಯ ಕೂಡ ತಂದು ಇಲ್ಲಿ ಇಂತಹ ಅಣು ವಿದ್ಯುತ್ ಕೇಂದ್ರಗಳನ್ನು ಮಾಡ ಬೇಕೆಂದು ಕೇಂದ್ರ ಸರಕಾರಕ್ಕೆ ಕಳಕಳಿಯಿಂದ ಮನವಿಗಳನ್ನೂ ಮಾಡುತ್ತಿದ್ದೇವೆ.

ಶ್ರೀ ಸಿ. ಬೈರೇಗೌಡ.—ಕೇಂದ್ರದವರು ನಮ್ಮ ರಾಜ್ಯದಲ್ಲಿ ಅಣು ಕೇಂದ್ರವನ್ನು ಮಾಡದೇ ಇದ್ದರೆ ನಮ್ಮ ರಾಜ್ಯದವರೇ ಇಂತಹ ಒಂದು ಅಣು ಕೇಂದ್ರವನ್ನು ಇಲ್ಲಿ ಏಕೆ ಸ್ಥಾಪನೆ ಮಾಡಬಾರದು ?

ಶ್ರೀ ಎಚ್. ಎಂ. ಚನ್ನಬಸಪ್ಪ.— ತಾವು ನಮಗೆ ಇದಕ್ಕೆ ಬೇಕಾಗುವ ಹಣವನ್ನು ಒದಗಿಸಿ ಕೊಟ್ಟರೆ ಅದನ್ನು ಮಾಡಲು ನಮಗೆ ಆಡ್ಡಿ ಇಲ್ಲ.

Mr. DEPUTY SPEAKER.—Since some members are anxious to put supplementaries about Question No. 397 and since the hon. member in whose name the Question stands, is absent, I will put it.

ALLOTMENT OF CARS

397. Sri ABDUL KHUDDUS ANWAR(Bhadravathi).—Will the Chief Minister be pleased to state:—

a) the number of cars allotted to the State in the year 1970–71, 1971–72.

b) the number of cars allotted to the M. L. As, M. L. Cs., M. Ps. and others during 1972–73 (Detail list may be furnished);

c) out of the cars allotted the number of cars allotted to the public and officials ?

Sri D. DEVARAJ URS (Chief Minister).—

a) 188 and 203 cars were allotted as State Discretionary quota for the period—(i) from the quarter February April 1970 to the quarter November 1970–January 1971 and (ii) from the quarter February 1971–April 1971 upto 31–3–1972.

b) 177 cars were allotted as State Discretionary quota during the period from 1–4–1972 to 31–3–1973 as detailed below :—

M. L. As.	M. L. Cs.	M. Ps.	Others
36	9	—	132

A list of persons to whom the above cars were allotted is placed on the table of the House.